# ‘ಮೀಡಿಯೋಕರ್ ಸಿನಿಮಾಗಳಲ್ಲಿ ನಟಿಸಲಾರೆ’

■ ಪದ್ಮನಾಭ ಭಟ್



ದೇಹಸೌಂದರ್ಯ ಮತ್ತು ಪ್ರತಿಭೆ ಎರಡನ್ನೂ ಸಮರ್ಥವಾಗಿ ದುಡಿಸಿಕೊಂಡರೆ ಚಿತ್ರರಂಗದಲ್ಲಿ ಬಹುಕಾಲ ಉಳಿದುಕೊಳ್ಳಬಹುದು ಎಂಬುದನ್ನು ಅರಿತಿರುವ ಆರೋಹಿ ನಾರಾಯಣ್, ತಮ್ಮ ಅಭಿನಯದ ಎರಡು ಸಿನಿಮಾಗಳ ಬಿಡುಗಡೆಯನ್ನು ಕಾಯುತ್ತಿದ್ದಾರೆ.

‘ನಂಗೆ ಸಾಕಷ್ಟು ಅವಕಾಶಗಳು ಬರುತ್ತಿವೆ. ಆದರೆ ಅವೆಲ್ಲ ಮೀಡಿಯೋಕರ್ ಸ್ಕ್ರಿಪ್ಟ್‌ಗಳು. ಐದೇ ಸಿನಿಮಾಗಳಲ್ಲಿ ನಟಿಸಿದರೂ ಪರವಾಗಿಲ್ಲ. ಆದರೆ ಮೀಡಿಯೋಕರ್ ಸಿನಿಮಾಗಳಲ್ಲಿ ನಾನು ನಟಿಸಲಾರೆ’ ಹೀಗೆ ಸ್ಪಷ್ಟವಾಗಿ ಹೇಳುತ್ತಾರೆ ಆರೋಹಿ ನಾರಾಯಣ್.

ಆರೋಹಿ ಕನ್ನಡ ಸಿನಿವೀಕ್ಷಕರಿಗೆ ಚಿರಪರಿಚಿತರೇನಲ್ಲ. ಹಾಗಂತ ಪೂರ್ತಿ ಹೊಸಬರೂ ಅಲ್ಲ. ‘ದೃಶ್ಯ’ ಸಿನಿಮಾದಲ್ಲಿ ರವಿಚಂದ್ರನ್ ಮಗಳ ಪಾತ್ರದಲ್ಲಿ ನಟಿಸಿದ್ದ ಅವರು ನಂತರ ಕೆಲಕಾಲ ಚಿತ್ರರಂಗದಿಂದ ದೂರವಿದ್ದರು. ಈಗ ಕಾರ್ತಿಕ್ ಸರಗೂರು ನಿರ್ದೇಶನದ ‘ಭೀಮಸೇನ ನಳಮಹಾರಾಜ’ ಸಿನಿಮಾ ಮೂಲಕ ಮತ್ತೆ ರಂಗಪ್ರವೇಶ ಮಾಡುತ್ತಿದ್ದಾರೆ. ಹಾಗೆಯೇ ರಮೇಶ್ ಅರವಿಂದ್ ನಟನೆಯ ‘ಶಿವಾಜಿ ಸುರತ್ಕಲ್’ ಸಿನಿಮಾದಲ್ಲಿಯೂ ಬಹುಮುಖ್ಯವಾದ ಪಾತ್ರವೊಂದರಲ್ಲಿ ಕಾಣಿಸಿಕೊಂಡಿದ್ದಾರೆ.

‘ಹಲವು ಅವಕಾಶಗಳು ಬಂದವು. ಈಗಲೂ ಬರುತ್ತಿವೆ. ನಾನೇ ಒಪ್ಪಿಕೊಂಡಿಲ್ಲ’ ಎನ್ನುವ ಅವರಿಗೆ ಎಂಥ ಅವಕಾಶಗಳನ್ನು ಒಪ್ಪಿಕೊಳ್ಳಬೇಕು ಎಂಬ ಕುರಿತೂ ಅಷ್ಟೇ ಸ್ಪಷ್ಟತೆ ಇದೆ.

‘ಒಂದು ಸಿನಿಮಾ ಒಪ್ಪಿಕೊಳ್ಳುವಾಗ ನಾನು ನೋಡುವುದು ಕಥೆ. ನಂತರ ಆ ಟೀಮ್ ಎಂಥದ್ದು ಎನ್ನುವುದನ್ನೂ ನೋಡುತ್ತೇನೆ. ಟೀಮ್ ಎಂದರೆ ಬರಿ ನಿರ್ದೇಶಕ, ನಾಯಕನಟ ಅಷ್ಟೇ ಅಲ್ಲ. ಆ ಸಿನಿಮಾದಲ್ಲಿ ಯಾರ್‍ಯಾರು ನಟಿಸುತ್ತಿದ್ದಾರೋ ಅವರೆಲ್ಲರೂ ಮುಖ್ಯ’ ಎನ್ನುತ್ತಾರೆ ಆರೋಹಿ. ಹಾಗೆಯೇ ಪೂರ್ತಿ ಹೊಸ ತಂಡದ ಜೊತೆ ಸಿನಿಮಾ ಮಾಡಲೂ ಅವರಿಗೆ ಕೊಂಚ ಹಿಂಜರಿಕೆ ಇರುವಂತಿದೆ. ‘ಮೊದಲು ಒಂದೆರಡು ಸಲ ಹೊಸಬರ ಚಿತ್ರವನ್ನು ಒಪ್ಪಿಕೊಂಡು ಪೆಟ್ಟು ತಿಂದಿದ್ದೇನೆ. ಹಾಗಾಗಿ ಈಗ ಹೊಸಬರ ಚಿತ್ರ ಎಂದರೆ ಕೊಂಚ ಹಿಂಜರಿಯುವಂತಾಗಿದೆ’ ಎನ್ನುತ್ತಾರೆ. ಆದರೆ ಅವರು ನಟಿಸಿರುವ ‘ಭೀಮಸೇನ...’ ಚಿತ್ರದಲ್ಲಿ ಬಹುತೇಕರು ಹೊಸಬರೇ. ಈ ಚಿತ್ರದ ಪಾತ್ರದ ಕುರಿತೂ ಅವರಿಗೆ ಸಾಕಷ್ಟು ನಿರೀಕ್ಷೆ ಇದೆ. ‘ಭೀಮಸೇನ’ ಚಿತ್ರದಲ್ಲಿ ಅಯ್ಯಂಗಾರಿ ಮನೆತನದಲ್ಲಿನ ಹಟಮಾರಿ ಹುಡುಗಿಯಾಗಿ ಕಾಣಿಸಿಕೊಂಡಿದ್ದಾರೆ. ಅಚ್ಯುತ್‌ಕುಮಾರ್ ಅವರ ಅಪ್ಪನ ಪಾತ್ರ ಮಾಡುತ್ತಿದ್ದಾರೆ. ಬ್ರಾಹ್ಮಣ ಸಂಪ್ರದಾಯ, ಪದ್ಧತಿಗಳನ್ನು ವಿರೋಧಿಸುವ, ಅಪ್ಪನಿಗೆ ಸದಾ ಎದುರಾಡುವ ಬೋಲ್ಡ್ ಹುಡುಗಿ ಪಾತ್ರ ಅವರದು.

‘ಶಿವಾಜಿ ಸುರತ್ಕಲ್’ ಸಿನಿಮಾದಲ್ಲಿ ರಮೇಶ್ ಅರವಿಂದ್ ಅವರ ಜೊತೆ ನಟಿಸಿದ್ದು ತನಗೊಂದು ಕಲಿಕಾ ಪ್ರಕ್ರಿಯೆಯಾಗಿತ್ತು ಎಂದು ಆರೋಹಿ ವಿನಯದಿಂದ ಹೇಳಿಕೊಳ್ಳುತ್ತಾರೆ. ‘ರಮೇಶ್ ಅವರಿಂದ ನಾನು ಶಿಸ್ತು ಕಲಿತೆ. ನಟನೆಯ ಹಲವು ಪಾಠಗಳನ್ನು ಕಲಿತೆ’ ಎಂದು ನೆನಪಿಸಿಕೊಳ್ಳುವ ಅವರು, ‘ಈ ಚಿತ್ರದಲ್ಲಿ ನಾನು ತುಂಬ ಮಹತ್ವದ ಪಾತ್ರದಲ್ಲಿ ನಟಿಸಿದ್ದೇನೆ. ರಮೇಶ್ ಅವರಿಗೆ ಸರಿಸಮ ಅನಿಸುವಂಥ ಪಾತ್ರ ನನ್ನದು. ಸೈಕಿಯಾಟ್ರಿಸ್ಟ್ ಪಾತ್ರದಲ್ಲಿ ನಟಿಸಿದ್ದೇನೆ’ ಎಂದು ತಮ್ಮ ಎರಡೂ ಸಿನಿಮಾಗಳ ಪಾತ್ರಗಳ ಕುರಿತೂ ಅವರು ವಿವರಿಸುತ್ತಾರೆ.

‘ಸಿನಿಮಾ ಬಿಟ್ಟು ಬೇರೆ ಯಾವ ವಿಷಯದಲ್ಲಿಯೂ ನನಗೆ ಆಸಕ್ತಿ ಇಲ್ಲ. ಸಿನಿಮಾಗೆ ಸಂಬಂಧಿಸಿದ ಎಲ್ಲವನ್ನೂ ಆಸಕ್ತಿಯಿಂದ ಕಲಿಯುತ್ತೇನೆ. ಸಾಕಷ್ಟು ಸಿನಿಮಾಗಳನ್ನು ನೋಡುತ್ತೇನೆ. ಅದರಲ್ಲಿ ಹಿರಿಯ ಕಲಾವಿದರು ಮಾಡಿರುವ ನಟನೆಯ ಸೂಕ್ಷ್ಮಗಳ ಕುರಿತು ಟಿಪ್ಪಣಿ ಮಾಡಿಕೊಳ್ಳುತ್ತೇನೆ’ ಎನ್ನುವ ಆರೋಹಿ ಅವರಿಗೆ ಸಂಗೀತದ ಅಭಿರುಚಿಯೂ ಇದೆ.

ಚಿತ್ರರಂಗದಲ್ಲಿ ಬಹುಕಾಲ ಉಳಿಯಲು ಪ್ರತಿಭೆಯಷ್ಟೇ ಸೌಂದರ್ಯ ಮತ್ತು ಅಂಗಸೌಷ್ಟವವೂ ಮುಖ್ಯ ಎನ್ನುವ ವಾಸ್ತವ ಆರೋಹಿಗೆ ಚೆನ್ನಾಗಿ ಗೊತ್ತು. ಹಾಗಾಗಿಯೇ ಅವರು ಜಿಮ್‌ನಲ್ಲಿ ಬಹುಕಾಲ ಕಳೆಯುತ್ತಾರೆ. ವ್ಯಾಯಾಮದ ಮೂಲಕ ದೇಹವನ್ನು ಹುರಿಗೊಳಿಸಿಕೊಂಡು ಹೊಸಬಗೆಯ ಆಯಾಮಗಳಿರುವ ಪಾತ್ರಗಳಲ್ಲಿ ನಟಿಸುತ್ತಾ ಮುಂದಡಿ ಇಡುವ ಕನಸಿಗೆ ನೀರೆರೆಯುತ್ತಿರುವ ಆರೋಹಿ, ‘ಸದ್ಯವೇ ಹೊಸ ರೂಪದೊಂದಿಗೆ ಬರುತ್ತೇನೆ’ ಎಂದು ಖಚಿತವಾಗಿ ಹೇಳುತ್ತಾರೆ. ■